(SRI S. KARIAPPA)

(*b*) the steps they have taken to redress the grievance ?

A.— Sri M. P. PATIL (Minister for Revenue).—

(*a*) Yes, there were representations.

(*b*) An extent of 82 acres of higher level land has been deleted from the list of irrigable lands under this tank and a sum of Rs. 6,744-15-0 being water rate and cesses in respect of these lands has been remitted.

ಶ್ರೀ ಎಸ್ ಕರಿಯಪ್ಪ.—ನೀರು ಅವಶ್ಯವಿರದಂಥ ಪ್ರದೇಶಗಳಿಗೆ, ಕಂದಾಯವನ್ನು ವಸೂಲ್ಮಾಡಿ ನೀರು ಸರದಿ ಮತ್ತು ಇತರ ತೆರಿಗೆಗಳ ಬಗ್ಗೆ ಎಧಿಸಿರುವ ಮೊಬಲಗನ್ನು ವಜಾಮಾಡಬೇಕೆಂಬ ಕನಕಪುರ ತಾಲ್ಲೂಕಿನ ಮಂಳವಾಡಿ ಕೆರೆಯ ಅಚ್ಚುಕಟ್ಟು ದಾರರು ಮನವಿ ಮಾಡಿಕೊಂಡಿದ್ದಾರೆಯೇ ?

*ಶ್ರೀ ಎಂ. ಪಿ. ಪಾಟೀಲ್.—1952ನೆಯ ಇಸ್ವಿಯಲ್ಲಿ ಅವರು ಮನವಿಮಾಡಿಕೊಂಡಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಅದರ ಮೇಲೆ ತೆಂಗಿನ ಬನಗಳ ಮತ್ತು ಮೇಲ್ಮಟ್ಟದಲ್ಲಿರುವ ಪ್ರದೇಶವನ್ನು ಸರ್ವೆ ಮಾಡುವುದಕ್ಕೆ ಕಳುಹಿಸಿದ್ದೀರಾ ?

ಶ್ರೀ ಎಂ ಪಿ. ಪಾಟೀಲ್.—ಆ ಮಾಹಿತಿ ನನ್ನ ಹತ್ತಿರ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಈಗ ತೋಟ ಮತ್ತು ಮೇಲ್ಮಟ್ಟದ ಭೂಮಿಗಳ ಮೇಲೆ ನೀರು ಹರಿದು ಹೋಗುವ ಪ್ರದೇಶಗಳಿಗೆ ಹಾಕಿರತಕ್ಕ ಕಾಂಟ್ರಿಬ್ಯೂಷನ್ ಸುಮಾರು 1,50,000 ರೂಪಾಯಿಗಳವರೆಗೂ ಬಾಕಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಇರಬಹುದು.

ಶ್ರೀ ಎಸ್. ಕರಿಯಪ್ಪ.—ಹೀಗೆ ಯಾವ ಪ್ರದೇಶಗಳಿಗೆ ನೀರು ಅನಾವಶ್ಯಕವಾಗಿ ಹರಿದು ಹೋಗಿಲ್ಲವೊ ಆ ಪ್ರದೇಶದಲ್ಲಿ ಬಾಕಿ ನಿಂತಿರುವುದೇ ?

ಶ್ರೀ ಎಂ. ಪಿ. ಪಾಟೀಲ್.—ಯಾವ ಪ್ರದೇಶಗಳಿಗೆ ನೀರು ಬೇಕಾಗುವುದಿಲ್ಲವೊ. ಆ ಪ್ರದೇಶಗಳನ್ನು ಎಕ್ಸಮ್ಪ್ಟ್ ಮಾಡಿದೆ. ಯಾವ ಪ್ರದೇಶಕ್ಕೆ ನೀರು ಬೇಕಾಗುತ್ತದೋ ಅದನ್ನು ಎಕ್ಸಮ್ಪ್ಟ್ ಮಾಡಿಲ್ಲ.

ಶ್ರೀ ಎಸ್. ಕರಿಯಪ್ಪ.—ಪೂರ್ತಿ ಯಾವ ಯಾವ ಪ್ರದೇಶಗಳಿಗೆ ನೀರು ಅವಶ್ಯಕವಾಗಿ ಹರಿಯುತ್ತದೆ, ಯಾವ ಯಾವ ಪ್ರದೇಶಗಳಿಗೆ ಅನಾವಶ್ಯಕವಾಗಿ ಹರಿಯುತ್ತದೆ ಎಂಬುದನ್ನು ಸರ್ವೆ ಮಾಡಲಾಗಿದೆಯೆ ?

ಶ್ರೀ ಎಂ. ಪಿ. ಪಾಟೀಲ್.—ಪೂರ್ತಿ ಸರ್ವೆಮಾಡಿ ಸರ್ಕಾರದವರು 1952-53ನೆಯ ಇಸ್ವಿಯಲ್ಲಿ ನಿರ್ಧಾರ ತೆಗೆದುಕೊಂಡಿದ್ದಾರೆ. ಆ ಪ್ರಕಾರ 82 ಎಕರೆಗೆ ನೀರಿನ ಅವಶ್ಯಕತೆ ಇಲ್ಲ. ಆದ್ದರಿಂದ ಆ ಪ್ರದೇಶಗಳು ಎಗ್ಸಮ್ಪ್ಟ್ ಮಾಡಲ್ಪಟ್ಟಿದೆ. ಉಳಿದ ಭೂಮಿಗೆ ನೀರಿನ ಉಪಯೋಗವಾಗುತ್ತದೆ. ಆ ಪ್ರದೇಶಗಳು ಎಗ್ಸಮ್ಪ್ ಮಾಡಲ್ಪಟ್ಟಿಲ್ಲ.

ಶ್ರೀ ಎಂ. ಲಿಂಗೇಗೌಡ.—ನೀರು ತೆಗೆದುಕೊಳ್ಳದೆ ಇರತಕ್ಕ ಜಮೀನು 500 ಎಕರೆ ಇರತಕ್ಕದ್ದು ಸರ್ಕಾರದ ನಿಗಾಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಲಿಂಗೇಗೌಡ.—500 ಎಕರೆಗಳ ಪೈಕಿ 82 ಎಕರೆ ಚಿಲ್ಲರೆ ಜಮೀನಿಗೆ ನೀರು ಕಂದಾಯ ವಜಾಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—500 ಎಕರೆ ನಮ್ಮ ಲಕ್ಷ್ಯಕ್ಕೆ ಬಂದಿಲ್ಲ. ಎಲ್ಲವನ್ನೂ ಸರ್ವೆಮಾಡಿದನಂತರ ಕಮಿಷನರು ರಿಪೋರ್ಟ್ ಮಾಡಿದರು. ಅದರ ಪ್ರಕಾರ 82 ಎಕರೆ ಎಗ್ಸೆಮ್ಪ್ಟ್ ಮಾಡಬೇಕೆಂದು ಶಿಫಾರಸ್ಸು ಮಾಡಿದರು. ಅದನ್ನು 1953ನೆಯ ಇಸ್ವಿಯಲ್ಲಿ ಸರ್ಕಾರದವರು ಮುಂಜೂರು ಮಾಡಿದ್ದಾರೆ.

ಶ್ರೀ ಎಂ. ಲಿಂಗೇಗೌಡ.—82 ಎಕರೆ ಜಾತ ಬಾಕಿ ಜಮೀನಿಗೂ ರೈತರು ನೀರು ತೆಗೆದುಕೊಳ್ಳುತ್ತಾ ಇಲ್ಲ ಎನ್ನುವುದು ಸರ್ಕಾರದ ನಿಗಾಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಸರ್ವೆ ಆದನಂತರ ಈ ರೀತಿ ನಿರ್ಧಾರವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ.

Separation of Lepers in Chakkere, Channapatna Taluk.

Q.—672. Sri S. KARIAPPA (Virupakshipura).—

Will the Government be pleased to state :—

(*a*) whether a scheme had been prepared for segregation of lepers at Chakkere, Channapatna Taluk ;

(*b*) the estimated cost of the scheme ;

(*c*) the stage at which the proposal now stands ?

A.—Sri R. M. PATIL (Minister for Health).—

(*a*) Yes.

(*b*) The estimated cost of the scheme was Rs. 12,600.

(*c*) The proposal has been dropped.

ಶ್ರೀ ಎಸ್. ಕರಿಯಪ್ಪ.—ಚಕ್ಕೆರೆ ಹತ್ತಿರ ಇರತಕ್ಕ ನಿವಾಸಿಗಳಿಗೆ ವ್ಯವಸ್ಥೆ ಮಾಡಬೇಕೆಂದು ಒಂದು ಯೋಜನೆ ತಯಾರಾಗಿತ್ತಲ್ಲ ಅದು ಯಾವ ವರ್ಷದಲ್ಲಿ ?

*Sri R. M. PATIL.—On account of the enquiry in the year 1942, the Health Ministry thought to establish one in such a place b cause 25 cases were found out of 1452 in 1942.

ಶ್ರೀ ಎಸ್. ಕರಿಯಪ್ಪ.—ಈ ರೀತಿ ಒಂದು ಯೋಜನೆಯನ್ನು ತಯಾರು ಮಾಡಲು ಆಲೋಚನೆ ಮಾಡಬೇಕಾದರೆ, ಪಕ್ಕದಲ್ಲಿರತಕ್ಕ ಕನಕಪುರ ತಾಲ್ಲೂಕು, ಚನ್ನಪಟ್ಟಣದಲ್ಲಿರತಕ್ಕ ಕ್ಲೋಸ್‌ಪೇಟೆ, ಮಳವಳ್ಳಿ ತಾಲ್ಲೂಕುಗಳಲ್ಲೆಲ್ಲಾ ಕುಷ್ಠರೋಗ ದಿನೇ ದಿನೇ

ಪ್ರಬಲವಾಗುತ್ತಾ ಇದೆ ಎಂದು ಹೇಳಿ ಇದನ್ನು ತಡೆಗಟ್ಟುವುದಕ್ಕೆ ಆಲೋಚನೆ ಮಾಡಿದ್ದರಲ್ಲವೆ ?

Sri R. M. PATIL.—That was in 1942.

ಶ್ರೀ ಎಸ್. ಕರಿಯಪ್ಪ.—ಈ ಉದ್ದೇಶದಿಂದ ಮಾತಿದಂಥ ಯೋಜನೆಯನ್ನು ಈಗ ಏಕೆ ಕೈಬಿಡ ಬೇಕಾಗಿ ಬಂತು ?

Sri R. M. PATIL.—There was an enquiry later on because according to the former plan the idea was to provide 3 acres and some guntas of land for each family. It costs something like 12,600 rupees to purchase this land. But, when it was actually taken up, the price of the land was e timated to be Rs. 43,585. So, in the year 1948 Government again reconsidered whether there was any possibility of spending so much money on that item. Ultimately, in the year 1953, again there was a census taken so far as these leprosy patients were concerned. But, in that area only 4 cases were found and these 4 cases were burnt cases and not contageous. So, in view of the less number of cases, Government thought of dropping that plan.

Deaths from Epidemics in Bangalore District.

Q.—673. Sri S. KARIAPPA (Virupakshipura).—

Will the Government be pleased to state :—

the incidence of deaths from the following diseases in Bangalore District for the past three years (figures may please be given talukwar and yearwar);

(i) Cholera, (ii) Leprosy, (iii) Malaria, and (iv) Consumption ?

A.—Sri R. M. PATIL (Minister for Health).—

Vide statement appended below.